

'ಕತೆನಾ!...' ದೀರ್ಘವಾಗಿ ಬಾಯ್ದೆರೆದು ನಿಧಾನವಾಗಿ ಮುಚ್ಚಿದ. 'ಈಗ ನೀನು ಅಳ್ತಿರೋದಕ್ಕೆಲ್ಲ ಕತೆ ಕಟ್ಟಬೇಡ. ಗೊತ್ತಾಯ್ತು? ಸುಮ್ನೆ ಒಪ್ಪಿಕೊ. ಈ ಸೀನ್ ಎಲ್ಲ ನನ್ನ ಹತ್ರ ಬೇಡ. ಅಂಥ ಬಳೆ ಬೇಕು ಅಂದ್ರೆ ನನ್ನ ಜೊತೆ ಬಾ. ಹೋಗೋಣ ಅಷ್ಟೆ.' ನಿರ್ಧಾರಯುತವಾಗಿ ಹೇಳಿದ... 'ಕತೆ ಅಂತೆ ಕತೆ. ತಾನೇ ಕಟ್ಟೋದು... ಮತ್ತೆ ಹೇಳೋದು...'

'ಸರಿ...' ಗಂಭೀರವಾಗಿ ಹೇಳಿದಳು. 'ನಿನಗೆ ಗೊತ್ತಾ... ಕತೆ ಕಟ್ಟೋಕೂ, ಕತೆ ಹೇಳೋಕೂ ವ್ಯತ್ಯಾಸ ಇದೆ ಅಂತ. ಕತೆ ಕಟ್ಟುವವನಿಗೆ ಸ್ವಾರ್ಥ ಇರುತ್ತೆ. ಕತೆ ಹೇಳುವವನಲ್ಲಿ ಸಂದೇಶ ಇರುತ್ತೆ. ನನಗೆ ಈ ಬಳೆ ಮತ್ತು ಕರವಸ್ತ್ರ ಕತೆ ಹೇಳ್ತಿವೆ.' ಒತ್ತಿ ನುಡಿದಳು.

'ಬಳೆ ಬಂದು ಕತೆ ಹೇಳೋದು ಅಂದ್ರೆ... ಏನರ್ಥ?' ಅಂಕಿತ ಸ್ವಲ್ಪ ಸಿಡುಕಿದ. 'ಕೇಳೋ ಮನಸ್ಸಿದ್ರೆ ಹೇಳ್ತೀನಿ. ಇಲ್ಲ ಅಂದ್ರೆ ನಿನ್ನ ಕೆಲಸ ನೋಡಿಕೊ' ಸುಮತಿಯೂ ಖಡಕ್ಕಾಗಿ ಹೇಳಿದಳು. ಅಂಕಿತನಲ್ಲಿ ಹಟ ಬಂದು... 'ಆಯ್ತು... ಅದೇನು ಹೇಳುತ್ತೋ ಹೇಳು. ಚೆನ್ನಾಗಿದ್ರೆ ಮಾತ್ರ ಕೇಳ್ತೀನಿ ಅಷ್ಟೆ...' ಚಕ್ಕಳ ಮಕ್ಕಳ ಹಾಕಿ ಕುಳಿತ ಅವಳೆದುರು.

ಸುಮತಿ ಹೇಳತೊಡಗಿದಳು,

'ಕತೆ ಅಂದ್ರೆ ಸಂವೇದನೆಗಳು. ಅದು ಸುಳ್ಳು, ಮೋಸ ಅಂತ ತಿಳಿಯಬಾರದು. ಈ ಸಂವೇದನೆಗಳಲ್ಲಿ ಭಾವನೆಗಳಿರುತ್ತವೆ, ಜೀವನದ ಪಾಠಗಳಿರುತ್ತವೆ, ಸಂದೇಶಗಳಿರುತ್ತವೆ; ಮತ್ತೆ... ಕೆಲವರ ಬದುಕು ಇರುತ್ತೆ. ಅದು ಕಟ್ಟಿದ್ದಲ್ಲ. ಕಂಡಿದ್ದು... ಈ ಕಡಗ ಮತ್ತು ಕರವಸ್ತ್ರ ಎರಡೂ ಸೇರಿ ಒಂದು ಕತೆ ಹೆಣೆದಿವೆ. ಅದನ್ನೇ ಹೇಳ್ತೀನಿ ಕೇಳು. ಇದು ಸುಮಾರು ನಾಲ್ಕುನೂರು ವರುಷಗಳಿಗೂ ಹಿಂದಿನ ಕತೆ. ನೀನು ಕತೆ ಕೇಳುವಾಗ ಈಗಿನ ಕಾಲದಿಂದ ಆ ಕಾಲಕ್ಕೆ ನಿನ್ನ ಮನಸ್ಸನ್ನ ಜಿಗಿದು ಕರೆದೊಯ್ಯಬೇಕು. ಇವತ್ತಿನ ವಿದ್ಯುತ್, ಫೋನ್, ಟೀವಿ., ರೇಡಿಯೊ... ಏನೂ ಇಲ್ಲದ ಕಾಲ ಅದು. ಹಾಗೇ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಮೌಲ್ಯಗಳಿಗಾಗಿ ಬದುಕುತ್ತಿದ್ದ ಕಾಲ ಅದು. ಪ್ರತಿಯೊಂದು ಕಾರ್ಯವೂ ಮನುಷ್ಯನ ಮನಸ್ಸಿನ ಸಾಮರ್ಥ್ಯವನ್ನು ಮತ್ತು ಕೌಶಲ್ಯವನ್ನು ಮಾತ್ರ ಅವಲಂಬಿಸಿದ ಕಾಲವದು.

ಅಂಜು ತನ್ನ ಗುಡಾರದ ಹೊರಗೆ ಕುಳಿತು, 'ಲಕ್ ಚಿಪ್ ನ ಜಾವೋಜೀ... ಮನ್ನೇ...' ಎಂದು ಗುನುಗುತ್ತಾ ಕಸೂತಿ ಹಾಕುತ್ತಿದ್ದಳು. ಎದುರಿನಲ್ಲಿ ವಿಶಾಲವಾದ ಮರುಭೂಮಿ. ಅಕ್ಕ ಪಕ್ಕ ಡೇರೆಗಳಲ್ಲಿ ಅವರ ಗುಂಪಿನ ಜನ. ಸುಮಾರು ನೂರು ಡೇರೆಗಳಲ್ಲಿ ಇವಳ ಡೇರೆಯೇ ಎಲ್ಲದಕ್ಕಿಂತ ಎತ್ತರವಾಗಿತ್ತು. ಅವಳು ನಲವತ್ತು ಒಂಟೆಗಳ ಮಾಲೀಕನ ಹೆಂಡತಿ. ಮೂರು ಮಕ್ಕಳ ತಾಯಿ. ನಲವತ್ತು ವರುಷದ ಹಿರಿಯ ಹೆಣ್ಣು. ಮಾಗಿದ ಮನಸ್ಸು, ಬುದ್ಧಿ. ಅವಳು ಹಾಕುತ್ತಿದ್ದ ಕಸೂತಿ, ಕನ್ನಡಿ ಮತ್ತು ಮಣಿಗಳ ಅಳವಡಿಕೆ ಅತ್ಯಂತ ಹೆಸರುಮಾಡಿತ್ತು. ಅವಳದೇ ಇಪ್ಪತ್ತು ಗುಡಾರಗಳಿದ್ದವು. ಅದರ ತುಂಬಾ ನವಿಲು, ಜಿಂಕೆ, ಮೊಲ, ಕಾಡು ಮರಗಳ, ಹಣ್ಣಿನ ಹರಿವಾಣಗಳ ಕಸೂತಿಗಳು. ಜೊತೆಗೇ ಅವಳ ಕಸೂತಿಯ ವಿಶೇಷ ಎಂದರೆ ಅರಮನೆಯ ಚಿತ್ರಗಳ ಕಸೂತಿ. ಇದು ಅವಳದ್ದೇ ವಿನ್ಯಾಸದಲ್ಲಿ ಮತ್ತಷ್ಟು ಮೆರಗು ಪಡೆದಿರುತ್ತಿತ್ತು. ಅಂಜು ಯಾವಾಗಲೂ ಗುನುಗುತ್ತಿದ್ದ ಹಾಡು – 'ಲಕ್ ಚಿಪ್ ನ ಜಾವೋಜೀ... ಮನ್ನೇ ಡೀಡ್ ಕರಾವೋ ಜೀ' ಈ ಹಾಡಿನೊಂದಿಗೇ ಅವಳ ದಿನ ಆರಂಭ ಮತ್ತು ಅಂತ್ಯ. ಈಗಲೂ ಕೂಡ ಅದನ್ನೇ ಗುನುಗುತ್ತ ಹಾಡುತ್ತಿದ್ದಾಗ ಗಂಡನ ಕರೆ– 'ಏಯ್... ಕೇಳಿಸ್ತಿಲ್ವ... ಕುಡಿಯಲು ಏನಾದರೂ ಕೊಡು. ನಾನು ಪಟ್ಟಣಕ್ಕೆ ಹೋಗಿ ಬರುತ್ತೇನೆ. ನಿನ್ನೆ ನಿನ್ನ ಕಸೂತಿ ಓಢ್ನಿಗಳು ಚಲೋ ವ್ಯಾಪಾರ ಆತು. ಗೊತ್ತಾ!' ಅಂಜು ಅವನಿಗೆ ಕುಡಿಯಲು ಮಜ್ಜಿಗೆ ನೀಡಿದಳು. ಅವನು ಹೇಳುತ್ತಿದ್ದ 'ಅದೆಂಥ ರಾಜ ಮಹಲ್ ಬಿಡಿಸ್ತೀಯೆ... ಭೇಷಕ್ ಚೆನ್ನಾಗಿದೆ. ಸಾರ್ಥಕ್ ಆತು...' ಗಂಡ ಮಧುಬಾಬು ಹೊರಟ ತನ್ನ ಒಂಟೆಯೇರಿ ಮತ್ತು ಕೂಗಿದ... 'ಬರುವಾಗ ಜಿಲೇಬಿ ತರ್ತೀನಿ ಕೋಟೆಯಿಂದ...' ಒಂಟೆಯನ್ನು ದೌಡಾಯಿಸಿದ. ಮಾರು ದೂರದವರೆಗೂ